**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಓಎಸ್ 354-2019**

ಪಿ ಡಬ್ಲ್ಯೂ-1

**ದಿನಾಂಕ 28-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲು ಶ್ರೀ ಪಿ ಡಿ ಪ್ರತಿವಾದಿ ಪರ ವಕೀಲರುಃ**

ನಮ್ಮ ತಾತ ಹೆಗ್ಗಡಿ ತಿಮ್ಮೇಗೌಡರಿಗೆ ಒಟ್ಟು 4 ಜನ ಮಕ್ಕಳು ಅವರುಗಳೆಂದರೆ ತಿಮ್ಮೇಗೌಡ, ಕರೀಗೌಡ, ಹುಚ್ಚೇಗೌಡ ಮತ್ತು ಸಣ್ಣೇಗೌಡ. ನಮ್ಮ ತಾತನಿಗೆ ಒಟ್ಟು 101 ಎಕರೆ ಜಮೀನು ಇತ್ತು. ನನಗೆ ನಾವು ಈಗ ಉಳುಮೆ ಮಾಡುತ್ತಿರುವ ಸರ್ವೇ ನಂಬರ 22/3 ನ್ನು ಹೊರತು ಪಡಿಸಿ ಬೇರೆ ಸರ್ವೇ ನಂಬರಗಳು ನನಗೆ ಗೊತ್ತಿರುವುದಿಲ್ಲ. ನನಗೆ ಹೆಗ್ಗಡಿ ತಿಮ್ಮೇಗೌಡ 4 ಜನ ಮಕ್ಕಳ ಪೈಕಿ ನಮ್ಮ ತಂದೆಗೆ 3 ಎಕರೆ ಜಮೀನು ಬಂದಿರುತ್ತದೆ ಅದರೆ ಉಳಿದವರಿಗೆ ಯಾವ ಸರ್ವೇ ನಂಬರನಲ್ಲಿ ಎಷ್ಟು ಜಮೀನು ಬಂದಿದೆ ಎಂದು ನನಗೆ ಗೊತ್ತಿರುವುದಿಲ್ಲ.

2. ನಮ್ಮ ತಂದೆ ಮತ್ತು ಅವರ ಸಹೋದರರ ನಡುವೆ ಯಾವುದೇ ವಿಭಾಗ ಪತ್ರದ ಮುಖಾಂತರ ವಿಭಾಗ ಆಗಿರುವುದಿಲ್ಲ. ನಮ್ಮ ದೊಡ್ಡಪ್ಪ ತಿಮ್ಮೇಗೌಡರಿಗೆ ತಿಮ್ಮಮ್ಮಾ ಎಂಬ ಒಬ್ಬಳೇ ಮಗಳಿದ್ದಾಳೆ ಎಂದರೆ ಸರಿ ಎಂದು ನಂತರ ಸರಿಯಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿ ಮುಂದುವರೆದುರೆ ನಾಗಮ್ಮ ಎಂದು ತಿಳಿಸಿರುತ್ತಾರೆ. ನಮಗೆ ಪ್ರಸ್ತುತ ಸ ನಂ. 22/3 ರಲ್ಲಿ 1 ಎಕರೆ, ಸ ನಂ. 23/1 ರಲ್ಲಿ 2 ಎಕರೆ ಇದೆ ಸದರಿ ಜಮೀನುಗಳಿಗೆ ಸಂಬಂಧಿಸಿದ ಆರ್ ಟಿ ಸಿ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ.

3. ಸದರಿ ದಾವಾ ಷೆಡ್ಯೂಲ್ ಸ್ವತ್ತಿನ ಸ ನಂ. 22/3 ರಲ್ಲಿ 1 ಎಕರೆ ಜಮೀನು ಪ್ರಸ್ತುತ ಪ್ರತಿವಾದಿಗಳ ಹೆಸರಿನಲ್ಲಿ ಖಾತೆ ಇದೆ. ಮೇಲೆ ತಿಳಿಸಿದ ಎರಡು ಸರ್ವೇ ನಂಬರಗಳಲ್ಲಿರುವ ಜಮೀನನ್ನು ಹೊರತು ಪಡಿಸಿ ಬೇರೆ ಯಾವುದೇ ಸರ್ವೇ ನಂಬರನಲ್ಲಿ ಯಾವುದೇ ಜಮೀನು ಇರುವುದಿಲ್ಲ. ನನ್ನ ಹೆಸರಿನಲ್ಲಿ ಇತರೆ ಜಮೀನುಗಳು ಇದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ

ಎಂದರೆ ಸರಿಯಲ್ಲ. ನಿಪಿ 5 ನ್ನು ರೂಪೇಶ ಎಂ.ಕೆ. ಖಾಸಗೀ ಭೂ ಮಾಪಕರಿಂದ ಸಿದ್ದಪಡಿಸಿಕೊಂಡಿರುತ್ತೇವೆ ಎಂದರೆ ಸರಿ.

4. ಸದರಿ ಸರ್ವೇಯರನ್ನು ಸರ್ವೇ ಮಾಡಿಸಲು ಪ್ರತಿವಾದಿಗಳು ಮತ್ತು ನಾವು ಎಲ್ಲರೂ ಸೇರಿ ಕರೆದುಕೊಂಡು ಬಂದು ಸರ್ವೇ ಮಾಡಿಸಿರುತ್ತೇವೆ. ಸದರಿ ರೂಪೇಶ ಭೂ ಮಾಪಕರ ಜೊತೆಗೆ ಶಾಮೀಲಾಗಿ ನಾನೇ ಅವರನ್ನು ಕರೆದುಕೊಂಡು ಬಂದು ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಸುಳ್ಳು ನಕ್ಷೆಯನ್ನು ತಯಾರುಮಾಡಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಮ್ಮ ತಂದೆ 2001-02 ನೇ ಇಸವಿಯಲ್ಲಿ ಮೃತ ಪಟ್ಟಿರುತ್ತಾರೆ.

5. ನಮ್ಮ ದೊಡ್ಡಪ್ಪ ತಿಮ್ಮೇಗೌಡರಿಗೆ ಸರ್ವೇ ನಂ. 22/3 ರಲ್ಲಿ 1.15 ಎಕರೆ, ಸರ್ವೇ ನಂ. 23/3 ರಲ್ಲಿ 1.18 ಗುಂಟೇ, ಸರ್ವೇ ನಂ. 28/5 ರಲ್ಲಿ 18 ಗುಂಟೆ ಜಮೀನು ನಮ್ಮ ತಾತ ಹೆಗ್ಗಡಿ ತಿಮ್ಮೆಗೌಡನ ಕಡೆಯಿಂದ ನಮ್ಮ ದೊಡಪ್ಪ ತಿಮ್ಮೇಗೌಡರಿಗೆ ಬಂದಿರುತ್ತದೆ ಎಂದರೆಸರಿಯಲ್ಲ. ಸಾಕ್ಷಿ ಮುಂದುವರೆದು ಎಲ್ಲಾ ಕೈ ಬರಹದ ಆರ್ ಟಿ ಸಿ ಗಳಲ್ಲಿ ಜಂಟಿಯಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಜಂಟಿ ಖಾತೆಯ ಆರ್ ಟಿ ಸಿ ಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ.

6. ಮೇಲೆ ಹೇಳಿದ ತಿಮ್ಮೇಗೌಡರಿ ಹಿಸ್ಸೆಗೆ ಬಂದಿರುವ ಜಮೀನುಗಳಲ್ಲಿ ನಮ್ಮ ದೊಡಪ್ಪ ಸ್ವಾಧೀನಾನುಭವವನ್ನು ಹೊಂದಿ ಅನುಭವಿಸುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ. ದಿಃ 04-02-1980 ರಲ್ಲಿ ನಮ್ಮ ದೊಡಪ್ಪನ ಮಗಳು ತಿಮ್ಮಮ್ಮಾ ಅವರ ತಂದೆಯಿಂದ ಅವರಿಗೆ ಬಂದ ಹಿಸ್ಸೆಯನ್ನು ಪ್ರತಿವಾದಿಗಳಿಗೆ ನೋಂದಾಯಿತ ಹಕ್ಕು ಖುಲಾಸೆ ಪತ್ರದ ಮುಖಾಂತರ ರೂಪಾಯಿ 4,000/- ಹಣವನ್ನು ಪಡೆದು ಹಕ್ಕನ್ನು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ.

7. 1980 ನೇ ಇಸವಿಯಲ್ಲಿ ಹಕ್ಕು ಖುಲಾಸೆ ಪತ್ರದ ಮುಖಾಂತರ 1 ನೇಪ್ರತಿವಾದಿ ಚಿಕ್ಕಮ್ಮ ರವರಿಗೆ ಹಕ್ಕು ಖುಲಾಸೆ ಪತ್ರದಲ್ಲಿನ ಸ್ವತ್ತುಗಳು ಖಾತೆ ವರ್ಗಾವಣೆಗೊಂಡಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ತಂದೆ ಮೃತ ಪಟ್ಟ ನಂತರ 2001-02 ನೇ ಇಸವಿಯಲ್ಲಿ ಅಕ್ರಮವಾಗಿ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಹಕ್ಕು ಖುಲಾಸೆ ಪತ್ರದ ಮುಖಾಂತರ ಬಂದ ಸ್ವತ್ತುಗಳ ಜೊತೆಗೆ ಇತರೆ ಜಮೀನುಗಳು

ಸಹ 1 ನೇ ಪ್ರತಿವಾದಿ ಚಿಕ್ಕಮ್ಮನ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ.

8. ಸದರಿ ಹಕ್ಕು ಖುಲಾಸೆ ಪತ್ರದಲ್ಲಿನ ಆಸ್ತಿ ಮತ್ತು ಇತರೆ ಆಸ್ತಿಗಳನ್ನು 1 ನೇ ಪ್ರತಿವಾದಿ 2 ನೇ ಪ್ರತಿವಾದಿಗೆ ಬ್ಯಾಂಕ್ ವ್ಯವಹಾರದ ಸಲುವಾಗಿ ಹಕ್ಕು ಖುಲಾಸೆ ಪತ್ರವನ್ನು ಮಾಡಿ ಕೊಟ್ಟಿರುತ್ತಾರೆ ಎಂದರೆ ಸರಿ. ಹಾಗಾಗಿ ದಾವಾ ಸ್ವತ್ತು ತಿಮ್ಮೇಗೌಡರ ಹಿಸ್ಸೆಗೆ ಬಂದ ಸ್ವತ್ತಾಗಿದ್ದು ನನಗಾಗಲಿ ಮತ್ತು ನಮ್ಮ ತಂದೆಯವರಿಗಾಗಲಿ ಸದರಿ ಜಮೀನಿನ ಮೇಲೆ ಯಾವುದೇ ಹಕ್ಕು, ಹಿತಾಸಕ್ತಿ ಮತ್ತು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

9. ಹಕ್ಕು ಸ್ವಾಧೀನ ಮತ್ತು ಹಿತಾಸಕ್ತಿ ಮತ್ತು ಆರ್ ಟಿ ಸಿ ಗಳು ಪ್ರತಿವಾದಿ ಹೆಸರಿನಲ್ಲಿ ಇಲ್ಲದೆ ಇದ್ದರೂ ಸಹ ನಾವು ಖಾಸಗೀ ಸರ್ವೇಯವರ ಜೊತೆಗೆ ಶಾಮೀಲಾಗಿ ನಿಪಿ 5 ನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಎಲ್ಲರೂ ಸೇರಿ ಒಟ್ಟಾಗಿ ಸರ್ವೇಯನ್ನು ಮಾಡಿಸಿರುತ್ತೇವೆ ಎಂದು ತಿಳಿಸಿರುತ್ತಾರೆ.

10. ಪ್ರತಿವಾದಿಗಳು ತಮ್ಮ ಹೆಸರಿನಲ್ಲಿರುವ ದಾವಾ ಸ್ವತ್ತುಗಳ ಆಧಾರದ ಮೇಲೆ ಬ್ಯಾಂಕ್ ನಿಂದ ಸಾಲವನ್ನು ಪಡೆದುಕೂಂಡಿರುತ್ತಾರೆ ಎಂದರೆ ಪಡೆದುಕೊಂಡಿರಬಹುದು ನನಗೆ ಗೊತ್ತಿರುವುದಿಲ್ಲ ಎಂದು ತಿಳಿಸಿರುತ್ತಾರೆ.

ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ